

# ನಟನೆಯ ಬಣ್ಣ ನನ್ನಲ್ಲಿ ಸಹನೆ ತುಂಬಿದೆ

**ತನುಶ್ರೀ**

ಉದಯದ 'ಅವಳು'ನ ರೇಖಾ

★ *ರೇಖಾ ಪಾತ್ರ ನಿಮಗೆ ಹೇಗೆನಿಸುತ್ತದೆ?*

ಮುಗ್ಧ ಗುಣಗಳ ಒಟ್ಟು ಅಂದದ ರೂಪ ರೇಖಾ. ಇದು ನನಗೆ ವೈಯಕ್ತಿಕವಾಗಿ ತುಂಬಾ ಇಷ್ಟ ಆಗುತ್ತದೆ. ಸ್ವತಃ ತಾನೇ ಅಸಹಾಯಕಳಾಗಿದ್ದರೂ ಮತ್ತೊಬ್ಬ ಹೆಣ್ಣಿನ ನೋವಿಗೆ ಮಿಡಿಯುತ್ತಾಳೆ. ತನ್ನ ಮಿತಿಯಲ್ಲಿ ಅನ್ಯಾಯವನ್ನು ತಡೆಯಲು ಪ್ರಯತ್ನಿಸುತ್ತಾಳೆ. ಎಲ್ಲಕ್ಕಿಂತ ಹೆಚ್ಚಾಗಿ ನೊಂದ ಮನಸ್ಸುಗಳಿಗೆ ಸಾಂತ್ವನವನ್ನು ಹೇಳುತ್ತಾಳೆ. ಬದುಕಿನ ಕನಸುಗಳನ್ನು ತುಂಬಿ, ಉತ್ಸಾಹದಿಂದ ಇರಲು ಪ್ರೇರೇಪಿಸುತ್ತಾಳೆ. ತನ್ನಿಂದ ಆಗಬಹುದಾದ ಎಲ್ಲಾ ನೆರವನ್ನು ಆಕೆ ನೀಡುತ್ತಾಳೆ. ಈ ಪಾತ್ರ ನನ್ನನ್ನೇ ಅರಸಿ ಬಂದಿದೆ. ನಿರ್ದೇಶಕರು ಆಡಿಷನ್ ಮಾಡದೆ ನೀನೇ ಸೂಕ್ತ ಎಂದು ಕರೆದು ಕೊಟ್ಟಿದ್ದಾರೆ. ಅದಕ್ಕೆ ನ್ಯಾಯ ಒದಗಿಸುವುದು ನನ್ನ ಕರ್ತವ್ಯ.

★ *ಬಣ್ಣದ ಜಗತ್ತಿನ ನಿಮ್ಮ ಆರಂಭಿಕ ದಿನಗಳು ಹೇಗಿದ್ದವು?*

ಸಿವಿಲ್ ಎಂಜಿನಿಯರಿಂಗ್ ಓದಿದ್ದೆ. ರಂಗಭೂಮಿಯ ಹಿನ್ನೆಲೆಯಿಂದ ಬಂದವಳಲ್ಲ. ನಮ್ಮ ವಂಶದಲ್ಲಿ ಯಾರು ಈ ಕ್ಷೇತ್ರದಲ್ಲಿ ಗುರುತಿಕೊಂಡಿಲ್ಲ. ನಿರ್ದೇಶಕರು ಮತ್ತು ಸಹಕಲಾವಿದರ ಪ್ರೋತ್ಸಾಹ ನನ್ನನ್ನು ನಟಿಯನ್ನಾಗಿ ರೂಪಿಸಿತು. ನನಗೆ ನಟನೆ ಕಷ್ಟ ಅನ್ನಿಸಲು ಅವಕಾಶ ಇಲ್ಲದಂತೆ ಮಾಡಿದವರೂ ಅವರೇ. ನೋಡಿದಷ್ಟು ಅಭಿನಯ ಸುಲಭ ಅಲ್ಲ. ಅದು ಧ್ಯಾನಸ್ಥ ಕಲೆ. ನಟನೆಯ ಸಾಗರಕ್ಕೆ ದುಮುಕಿದಾಗಲೇ ಆದರ ಆಳ– ಅಗಲ ಎಣಿಕೆಗೆ ಸಿಗದಷ್ಟು ವಿಸ್ತಾರ ಇದೆ ಎನ್ನುವುದು ಗೊತ್ತಾಗುವುದು.

★ *ಅಭಿನಯಮುಖಿ ಪಯಣ ಹೇಗಿತ್ತು?*

ಮೊದಲ ಪಾತ್ರವೇ ನೆಗೆಟಿವ್ ಪಾತ್ರ. 'ಪುಟ್ಟಮಲ್ಲಿಯ' ಅನನ್ಯಳಾಗಿದ್ದೆ. ಅದರಲ್ಲಿ ಗಂಡ ಹುಟ್ಟು ಸೋಮಾರಿ. ದುಡಿಮೆ ಎನ್ನುವುದು ಅವನಿಗೆ ಆಗದ ಕೆಲಸ. ನಾನು ತವರು ಮನೆಯನ್ನು ಸೇರಿದ್ದೆ. ನೋಡಲು ತುಂಬಾ ಸಜ್ಜನಿಕೆಯ ಸ್ತ್ರೀ ಅನ್ನಿಸಿದರೂ ಮಾಡುವ ಕೃತ್ಯಗಳು ಮಾತ್ರ ಅಪಾಯಕಾರಿ ಉದ್ದೇಶದಿಂದ ಕೂಡಿದ್ದವು. ಆ ಪಾತ್ರವೂ ನನಗೆ ತುಂಬಾ ಇಷ್ಟವಾಗಿತ್ತು.

'ನಾಗಕನ್ನಿಕೆ'ಯಲ್ಲಿ ಚಿಕ್ಕಿ ಎನ್ನುವ ಹಾವಿನ ಪಾತ್ರ ಮಾಡಿದ್ದೆ. ಅದು ಒಳಿತನ್ನು ಬಯಸುವ ಪಾತ್ರ ನ್ಯಾಯಕ್ಕಾಗಿ ಹೋರಾಡುವ ವ್ಯಕ್ತಿತ್ವ. ಮಯೂರ ಪಟೇಲ್ ಅವರ 'ರಾಜೀವ್' ಸಿನಿಮಾದಲ್ಲಿ ನಾಯಕನ ತಂಗಿ ಪಾತ್ರವನ್ನು ನಿರ್ವಹಿಸಿದ್ದೇನೆ. ಹೀಗೆ ಭಿನ್ನ ಪಾತ್ರಗಳನ್ನು ನಿರ್ವಹಿಸಿರುವ ನನಗೆ ಈ ಕ್ಷೇತ್ರ ನಿಜಕ್ಕೂ ಆಕರ್ಷಕ ಅನ್ನಿಸಿದೆ. ಪಾತ್ರಗಳ ಗುಣಾವಗುಣಗಳು ಏನೇ ಇರಲಿ ಅವುಗಳಿಗೆ ಜೀವ ತುಂಬುತ್ತೇನೆ. ಗೊತ್ತಿರದ ಕೆಲಸದಲ್ಲಿ ತೊಡಗಿದ್ದಾಗ ಚಿಕ್ಕ ಚಿಕ್ಕ ಸಂಗತಿಗಳಿಂದ ಹಿಡಿದು ಪಾತ್ರಕ್ಕೆ ಜೀವ ತುಂಬುವ ಕಲೆ ಕಲಿಸುವ ತನಕ ನನ್ನನ್ನು ತಿದ್ದಿದವರಿಗೆ ಕೃತಜ್ಞತೆ ಹೇಳಬಯಸುತ್ತೇನೆ.

★ *ಎಂಜಿನಿಯರ್ ಆಗದೆ ಇಲ್ಲಿಗೇಕೆ ಬಂದೆ ಅಂತ ಅನ್ನಿಸಿಲ್ವಾ?*

ಖಂಡಿತ ಹಾಗೆ ಒಮ್ಮೊಮ್ಮೆ ಅನ್ನಿಸಿತ್ತು. ಏಕೆಂದರೆ ಇಲ್ಲಿ ತಾಳ್ಮೆ ಬಹಳ ಮುಖ್ಯ. ಯಾವುದೂ ಅವಸರಕ್ಕೆ ಆಗುವಂತಹದ್ದಲ್ಲ. ಪ್ರಯೋಗಶಾಲೆಯಲ್ಲಿಯೇ ಕಾಲ ಕಳೆದ ನನಗೆ ಇಲ್ಲಿಯ ಶಿಕ್ಷಣ ಬೇರೆ ರೀತಿಯೇ ಅನ್ನಿಸಿತು. ಹಚ್ಚಿದ ಬಣ್ಣ ಸಹನೆಯನ್ನು ಕಲಿಸಿದೆ. ಈಗ ಎಂಜಿನಿಯರ್ ಮಿಸ್ ಮಾಡಿಕೊಂಡಿದ್ದೇನೆ ಅಂತ ಅನ್ನಿಸುವುದಿಲ್ಲ. ಹಿರಿಯ ನಟರು ಕಷ್ಟಪಟ್ಟಿರುವ ಕಥೆಗಳನ್ನು ಕೇಳಿದರೆ ನಾನು ಅನುಭವಿಸಿರುವುದು ಏನೂ ಅಲ್ಲ. ಹಿರಿಯರ ಅನುಭವವೂ ನನಗೆ ಸಮಾಧಾನ ತುಂಬುವ ಮೂಲಕ ಸಹನೆಯ ಅಗತ್ಯವನ್ನು ಹೇಳಿಕೊಟ್ಟಿದೆ.

★ *ನಿಮ್ಮ ಮುಂದಿನ ಕನಸು ಏನು?*

ಮುಂದಿನ ದಿನಗಳು ಅನಿರೀಕ್ಷಿತ. ಕಂಕಣಭಾಗ್ಯ ಕೂಡಿ ಬಂದರೆ ಮದುವೆಯಾಗಿ ಈಗಿರುವ ಬದುಕು ಮತ್ತೊಂದು ಆಯಾಮ ಪಡೆಯಬಹುದು. ಏನೇ ಆದರೂ ಮುಂದೆ ನಾನೇ ಸ್ವಂತ ಇಂಟಿರಿಯರ್ ಡಿಸೈನಿಂಗ್ ಕಂಪನಿಯನ್ನು ಆರಂಭಿಸಬೇಕು ಎಂದುಕೊಂಡಿದ್ದೇನೆ. ಇದು ನನಗೆ ತೀರಾ ಆಸಕ್ತಿ ಇರುವ ಕ್ಷೇತ್ರ.

★ *ನಿಮ್ಮ ಪೋಷಕರ ಪ್ರೋತ್ಸಾಹ ಹೇಗಿದೆ?*

ನಾಗಮಂಗಲ ತಾಲ್ಲೂಕು ಜವರಾಯನಹಳ್ಳಿ ನಮ್ಮೂರು. ತಂದೆ ಶ್ರೀನಿವಾಸ್ ಕೃಷಿಕ. ಅಮ್ಮ ಬೆಂಗಳೂರಿನಲ್ಲಿ ನರ್ಸ್ ಆಗಿದ್ದಾರೆ. ಪ್ರೌಢಶಾಲೆಯಿಂದ ಬೆಂಗಳೂರಿನಲ್ಲಿಯೇ ಓದಿದ್ದೇನೆ. ನಮ್ಮದು ಅವಿಭಕ್ತ ಕುಟುಂಬ ನನಗೆ ಇಬ್ಬರು ತಮ್ಮಂದಿರು ಇದ್ದಾರೆ. ಯಾವುದಕ್ಕೂ ನಿರ್ಬಂಧ ನಮ್ಮ ಮನೆಯಲ್ಲಿ ಇಲ್ಲ. ಏನೇ ಮಾಡಿದರೂ ಸರಿಯಾಗಿ ಮಾಡುತ್ತೇನೆ ಎನ್ನುವ ವಿಶ್ವಾಸ ಅವರದು. ವೃತ್ತಿಯ ಆಯ್ಕೆಯಲ್ಲಿಯೂ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದಾರೆ. ನನ್ನ ತಮ್ಮಂದಿರು ಮಾತ್ರ ಪ್ರತಿ ಹಂತದಲ್ಲಿಯೂ ನನ್ನ ಬೆನ್ನಿಗೆ ನಿಂತಿರುತ್ತಾರೆ. ಮನೆಯವರೆಲ್ಲಾ ನನ್ನ ಅಭಿನಯದ ವಿಮರ್ಶಕರು. ಅವರು ಮೆಚ್ಚುಗೆಗಿಂತ ತಿದ್ದಿಕೊಳ್ಳುವ ನಿಟ್ಟಿನಲ್ಲಿಯೇ ಹೆಚ್ಚು ಹೇಳುತ್ತಾರೆ. ಉಡುಗೆ ತೊಡುಗೆ ಎಲ್ಲಾ ನನ್ನ ಆಯ್ಕೆ.

■ ರಾಘವೇಂದ್ರ